17. ಬೀದರ್	ಔರಾದ್	15	1	ಮಧ್ಯಂತರ
	ಬಸವಕಲ್ಯಾಣ	15	—	ಮಂ.ಪಂ.
	ಬಾಲ್ಕಿ	15	—	
	ಬೀದರ್	15	—	
	ಹುಮ್ನಾಬಾದ್	13	—	
		73	**1**	
18. ರಾಯಚೂರು	ರಾಯಚೂರು	15		
	ಮಾನ್ವಿ	16		
	ದೇವದುರ್ಗ	14	1	ಮಧ್ಯಂತರ
	ಲಿಂಗಸುಗೂರು	17		ಮಂ.ಪಂ.
	ಸಿಂಧನೂರು	14		
	ಕುಷ್ಟಗಿ	14	1	
	ಕೊಪ್ಪಳ	15		
	ಗಂಗಾವತಿ	16		
	ಯಲಬುರ್ಗಾ	15	1	
		136	**3**	
19.	ಬಳ್ಳಾರಿ	15		
	ಸಿರುಗುಪ್ಪ	10		
	ಸಂಡೂರು	9	1	
	ಹೊಸಕೋಟೆ	9	—	
	ಕೂಡ್ಲಿಗಿ	13	1	
	ಹಗರಿಬೊಮ್ಮನಹಳ್ಳಿ	9		
	ಹಡಗಲಿ	10		
	ಹರಪನಹಳ್ಳಿ	14		
		89	**2**	

ಜೈನ ಕಾಶಿಯಾದ ಮೂಡಬಿದರೆಯಲ್ಲಿ ಅಭಿವೃದ್ಧಿ ಕಾರ್ಯ

265-ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದ ಜೈನ ಕಾಶಿಯಾದ ಮೂಡಬಿದರೆಗೆ ಉತ್ತರ ಭಾರತದಿಂದ ಬರುತ್ತಿರುವ ಸಾವಿರಾರು ಜೈನ ಯಾತ್ರಿಕರನ್ನು ಆಕರ್ಷಿಸುವಂತೆ ಸರ್ಕಾರ ಏನು ಕಾರ್ಯಕ್ರಮ ಕೈಗೊಂಡಿದೆ?

ಆ) ನೂರಾರು ವರ್ಷಗಳ ಹಿಂದೆಯೇ ಕಟ್ಟಲ್ಪಟ್ಟ ಇಲ್ಲಿಯ ಜೈನ ಬಸದಿಗಳನ್ನು ಸುಸ್ಥಿತಿಯಲ್ಲಿಡುವಂತೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಇ) ಇಲ್ಲಿಯ ಜೈನ ಬಸದಿಗಳ ಪವಿತ್ರ ಕೆರೆಗಳ ಜೀರ್ಣೋದ್ಧಾರದ ಬಗ್ಗೆ ಏನಾದರೂ ಯೋಜನೆ ರೂಪಿಸಿರುವುದೇ?

ಈ) ಯಾತ್ರಿಗಳ ಹಾಗೂ ಪ್ರವಾಸಿಗಳ ಸವಲತ್ತುಗಳ ಬಗ್ಗೆ ಅಲ್ಲಿ ಯೋಜನೆ ಏನಾದರೂ ತಯಾರಿಸಲಾಗಿರುವುದೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು):

ಅ) ಮೂಡಬಿದರೆಯನ್ನು ಹೆಚ್ಚು ಆಕರ್ಷಣೀಯ ಮಾಡಲು ಸಾವಿರಕಂಬದ ಬಸದಿಗೆ ಹೊನಲು ಬೆಳಕಿನ ವ್ಯವಸ್ಥೆಯನ್ನು ಪ್ರವಾಸೋದ್ಯಮ ಇಲಾಖೆ ಮಾಡಿದ್ದು, ಪ್ರವಾಸಿಗರ ಅನುಕೂಲಕ್ಕಾಗಿ ಪ್ರವಾಸಿ ಗೃಹವನ್ನು ನಿರ್ಮಿಸಿ, ನಿರ್ವಹಿಸಲಾಗುತ್ತಿದೆ.

ಆ) ಮೂಡಬಿದರೆಯಲ್ಲಿರುವ ಜೈನ ಬಸದಿಗಳು ಕೇಂದ್ರ ಸರ್ಕಾರದ ಭಾರತೀಯ ಪುರಾತತ್ವ ಇಲಾಖೆಯ ಕಕ್ಷೆಯಲ್ಲಿದ್ದು, ರಾಜ್ಯ ಸರ್ಕಾರದ ಕಾರ್ಯವ್ಯಾಪ್ತಿಗೆ ಬರುವುದಿಲ್ಲ.

ಇ) ಇಲ್ಲ.

ಈ) ಪ್ರವಾಸಿಗರ ಅನುಕೂಲಕ್ಕಾಗಿ 8 ಕೊಠಡಿಗಳ ಪ್ರವಾಸಿ ಗೃಹವನ್ನು ನಿರ್ಮಿಸಲಾಗಿದೆ.

ಭೀಮಾನದಿಗೆ ಬ್ಯಾರೇಜ್ ಕಟ್ಟುವ ಬಗ್ಗೆ

338-ಶ್ರೀ ಬಾಬುರಾವ್ ಚವ್ಹಾಣ್ (ಶಹಬಾದ್): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಹಾಬಾದ್ ಮತ ಕ್ಷೇತ್ರಕ್ಕೆ ಸಮೀಪವಿರುವ ಭೀಮಾನದಿಗೆ ಬ್ಯಾರೇಜು ಕಟ್ಟುವ ಯೋಜನೆ ಸರ್ಕಾರದವರ ಗಮನದಲ್ಲಿ ಇದೆಯೇ?

ಆ) ಹಾಗಿದ್ದರೆ, ಸರ್ಕಾರದವರು ಸದರಿ ಬ್ಯಾರೇಜ್ ಕಟ್ಟಲಿಕ್ಕೆ ಅಂದಾಜು ಪಟ್ಟಿ ತಯಾರಿಸಿದ್ದಾರೆಯೇ?

ಇ) ಸನ್ನತಿಯಲ್ಲಿ ಒಂದು ಬ್ಯಾರೇಜ್ ಮಂಜೂರು ಮಾಡಲಾಗಿರುವುದೇ? (ಅದರ ವಿವರವನ್ನು ಒದಗಿಸುವುದು)

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ(ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ಗುಲ್ಬರ್ಗಾ ತಾಲ್ಲೂಕಿನ ಮುಗಳನಾಗಾಂವ ಕೆರೆಯ ನೀರು ಉಪಯೋಗ ಮಾಡಲಾರದ ಬಗ್ಗೆ.

339-ಶ್ರೀ ಬಾಬುರಾವ್ ಚವ್ಹಾಣ್ (ಶಹಾಬಾದ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ತಾಲ್ಲೂಕಿನಲ್ಲಿ ಮುಗಳನಗಾಂವ ಕೆರೆಯು ಕಟ್ಟಲಾಗಿದ್ದು ಆ ಕೆರೆಯ ನೀರು ಉಪಯೋಗ ಮಾಡದಿರಲು ಕಾರಣವೇನು?

ಆ) ಆ ನೀರು ಸವಳೂ ನೀರೂ ಎಂದೂ ಗಮನಕ್ಕೆ ಬಂದಿದ್ದು ಅಲ್ಲಿ ಕೆರೆ ಕಟ್ಟುವ ಉದ್ದೇಶವೇನಿತ್ತು.?

ಇ) ಆ ಕೆರೆಯಿಂದ ಭೂಮಿ ಕಳೆದುಕೊಂಡವರಿಗೆ ಇನ್ನೂ ಪರಿಹಾರರ್ಥ ಕೊಡದಿರಲು ಕಾರಣವೇನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಮುಗಳನಗಾಂವ್ ಕೆರೆಯ ನೀರನ್ನು ರೈತರುಗಳು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಆ) ಆ ನೀರು ನೀರಾವರಿಗೆ ಯೋಗ್ಯವಾಗಿರುತ್ತದೆ.